ಶ್ರೀ ಎ. ಬಸವರಾಜು.—ಕೊಳ್ಳೆಗಾಲ ಫ್ಯಾಕ್ಟರಿಯ ಒಂದು ಯೂನಿಯನ್ ಅವರು ಮಾತ್ರ ಒಪ್ಪಿಲ್ಲವೆಂದು ಹೇಳಿದಿರಿ. ಈ 12 ಕಂಡೀಷನ್‌ಗಳಲ್ಲಿ ಯಾವುದನ್ನು ಒಪ್ಪಿಲ್ಲ? ಮತ್ತು ಈ ಕಾರ್ಖಾನೆಗಳಲ್ಲಿ ಲಾಸ್ ಆಗುತ್ತಿರುವುದಕ್ಕೆ ಮೇನೇಜ್‌ಮೆಂಟ್ ಮತ್ತು ಎಂಪ್ಲಾಯೀಸ್‌ಗಳಲ್ಲಿ ಹೊಂದಾಣಿಕೆ ಇಲ್ಲದೇ ಇರುವುದು ಒಂದು ಕಾರಣವಲ್ಲವೆ? ಇನ್ನು ಮುಂದೆ ಕಾರ್ಖಾನೆಯು ಒಬ್ಬ ಲೇಬರ್ ಎಂಪ್ಲಾಯಿಯನ್ನು ಮೇನೇಜ್‌ಮೆಂಟ್‌ನಲ್ಲಿ ಸೇರಿಸುವುದಕ್ಕೆ ಏನಾದರೂ ಮಾಡುತ್ತಿರುವರಾ?

Sri B. RACHAIH.—It is with regard to putting the labour representative to purchase the cocoon.

Sri AZEEZ SAIT.—Will the Hon. Minister be pleased to state whether these 12 conditions are considered constitutional and legal as per laws prevailing in the country?

Sri B. RACHAIAH.—This is a working arrangement between the Labour Union and the management. When all the other Unions have agreed to these conditions, where is the question of refusal by the Kollegal Unit?

ಶ್ರೀ ಎನ್. ಹಚ್ಚಮಾಸ್ತಿಗೌಡ.—ಇಡೀ ರಾಜ್ಯದಲ್ಲಿ ಕಕೂನ್ ಮಾರ್ಕೆಟ್‌ಗಳನ್ನು ಸ್ಥಾಪನೆ ಮಾಡದೆ, ಕಾಲಕ್ಕೆ ಸರಿಯಾಗಿ ಉತ್ತಮವಾದಂಥ ನೂಲು ಸಿಕ್ಕದಿರುವುದರಿಂದ ಈ ರೀತಿ ಕಾರ್ಖಾನೆಗಳನ್ನು ಮುಚ್ಚುವುದಕ್ಕೆ ಕಾರಣವಲ್ಲವೆ ಮತ್ತು ಲೇಬರ್ ರೆಪ್ರಸೆಂಟೇಟಿವ್ಸ್ ಅನ್ನು ನೂಲನ್ನು ಕೊಂಡುಕೊಳ್ಳುವುದಕ್ಕೆ ಕಳುಹಿಸಬೇಕೆ ಇರುವುದರಿಂದ ಈ ಕಾರ್ಖಾನೆಗಳ ಮಟ್ಟಿಗೆ ಉತ್ತಮವಾಗದಿರುವುದಕ್ಕೆ ಕಾರಣವಲ್ಲವೇ ಹೇಗೆ?

ಶ್ರೀ ಬಿ. ರಾಚಯ್ಯ.—ಕಕೂನ್ ಮಾರ್ಕೆಟ್‌ಗಳನ್ನು ರಾಜ್ಯದ ಎಲ್ಲಾ ಕಡೆ ತೆರೆದಿದ್ದೇವೆ. ಬೇಕಾಗುವಷ್ಟಕ್ಕಂಥ ಕಕೂನ್‌ಗಳು ಎಲ್ಲಾ ಮಾರ್ಕೆಟ್‌ಗಳಿಗೂ ಬರುತ್ತಿಲ್ಲ. ಅಲ್ಲದೆ ಬರತಕ್ಕಂಥ ಗೂಡುಗಳು ಏನಿವೆ, ಅವುಗಳಿಂದ ಸರಿಯಾದಂಥ ನೂಲು ಸಿಕ್ಕದೇ ಇರುವುದರಿಂದ ಲಾಸ್ ಆಗುವುದಕ್ಕೆ ಕಾರಣವಾಗಿದೆ.

Imposition of Section 144 of the Criminal Procedure Code in Gangasandra Village

428. Sri GANGA BOVI (Gulur) —

Will the Chief Minister be pleased to state :—

(*a*) whether Section 144 of the Criminal Procedure Code was imposed in Gangasandra Village in the month of June 1969 ;

(*b*) if so, the number of people arrested in that village ;

(*c*) the number of police posted on special duty and the expenditure incurred in that behalf ?

Sri VEERENDRA PATIL (Chief Minister).—

(*a*) Yes.

(*b*) Thirty-eight persons.

(*c*) Two Circle Inspectors, 13 Sub-Inspectors, 49 Head Constables and 105 Constables of the Civil Police and one Asst. Sub Inspector, 5 Head Constables and 30 Constables of the Reserve Police had been posted on Special duty and a sum of Rs. 1,290 has been incurred in this behalf.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ಈ ಗ್ರಾಮದಲ್ಲಿ 144ನೇ ಸೆಕ್ಷನ್ ಉಪಯೋಗಿಸಲು ಇದ್ದಂತಹ ಕಾರಣಗಳೇನು ?

† ಶ್ರೀ ವೀರೇಂದ್ರ ಪಾಟೀಲ್.—ಈ ಹಳ್ಳಿಯವರು ಇಲ್ಲಿ ನಾಟಕವಾಡಬೇಕು ಎಂದು ಇದ್ದರು. ಈ ಹಳ್ಳಿಯಲ್ಲಿ ಎರಡು ಪಾರ್ಟಿಗಳಿದ್ದವು. ಇಲ್ಲಿನ ಜನರು ಒಂದು ನಾಟಕವಾಡಬೇಕೆಂದು ನಿರ್ಣಯ ಮಾಡಿದಂತೆ ನಾಟಕ ಆರಂಭವಾಗುವುದಕ್ಕೆ ಮುನ್ನ ಕೆಲವು ಪಾತ್ರಧಾರಿಗಳು ಮಧ್ಯದಲ್ಲಿ ಬರುವುದಿಲ್ಲ ಎಂದಾಗ ಇಲ್ಲಿದ್ದ ಎರಡು ಪಾರ್ಟಿಗಳವರಿಗೂ ಜಗಳವಾಗುವ ಸಂಭವ ಇತ್ತು. ಇದರಿಂದ ಇಲ್ಲಿನ ಜನರಿಗೆ ಒಂದು ರೀತಿಯಾದ ಘರ್ಷಣೆಯಾಗುವ ಸಂಭವ ಇದೆ ಎಂದು ಇಲ್ಲಿನ ಅಧಿಕಾರಿಗಳಿಗೆ ತಿಳಿದು ಬಂದುದರಿಂದ ಇಲ್ಲಿನ ಅಧಿಕಾರಿಗಳು ಮುಂಜಾಗರೂಕತೆಗಾಗಿ 144ನೇ ಸೆಕ್ಷನ್‌ನ್ನು ಇಲ್ಲಿ ಜಾರಿ ಮಾಡಬೇಕಾಗಿ ಬಂತು.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್.—ಗಂಗನಂದ್ರ ಎನ್ನುವುದು ಒಂದು ಸಣ್ಣ ಗ್ರಾಮ. ಇಲ್ಲಿನ ಗ್ರಾಮದಲ್ಲಿ ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯವರು ಲೈಸನ್ಸ್ ಇಲ್ಲದೆ ನಾಟಕವಾಡುತ್ತಾರೆ ಎಂದು ಪ್ರಕಟಣೆ ಹೊರಡಿಸಿದುದರಿಂದ ಸರಕಾರದವರು ಇಷ್ಟೊಂದು ಹೆಚ್ಚು ಜನ ಪೋಲೀಸರನ್ನು ಇಲ್ಲಿ ನೇಮಿಸಿರುವುದು ಸರಿಯೇ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಆಗಲೇ ಉತ್ತರ ಹೇಳಿವೆ. ಈ ಊರಿನಲ್ಲಿ ಎರಡು ಪಾರ್ಟಿಗಳಿದ್ದವು. ಇಲ್ಲಿ ನಾಟಕವಾಡುವಾಗ ಈ ಊರಿನವರೇ ಅಲ್ಲದೆ ಸುತ್ತಮುತ್ತಲಿನ ಊರಿನ ಜನರೂ ಅಲ್ಲಿಗೆ ನಾಟಕ ನೋಡಲು ಬರುತ್ತಾರೆ ಮತ್ತು ಇಲ್ಲಿನ ಜನತೆಯ ಶಾಂತಿಗೆ ಭಂಗ ವಾಗಬಹುದು ಎನ್ನುವ ಸೂಚನೆಗಳು ತಿಳಿದುಬಂದುದರಿಂದ ಇಲ್ಲಿ ಇರುವ ಅಧಿಕಾರಿಗಳು 144ನೇ ಸೆಕ್ಷನ್‌ನ್ನು ಉಪಯೋಗ ಮಾಡಿ ಶಾಂತಿಗೆ ಧಕ್ಕೆ ಬಾರದಂತೆ ನೋಡಿಕೊಳ್ಳಬೇಕೆಂದು ಮಾಡಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—144 ಸೆಕ್ಷನ್ ಹಾಕುವಾಗ ಆರ್ಡರಿನಲ್ಲಿ ಇಲ್ಲಿರುವ ಕಾಂಗ್ರೆಸ್ಸಿನವರಿಂದ ಗಲಾಟೆಯಾಗುತ್ತದೆ ಎಂದು ಹೇಳಿ ಆರ್ಡರು ಬರೆದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್. —ಏನು ಆರ್ಡರು ಬರೆದಿದ್ದಾರೋ ಆ ಆರ್ಡರಿನ ಪ್ರತಿ ಈಗ ನನ್ನ ಮುಂದೆ ಇಲ್ಲ.

ಶ್ರೀ ಗಂಗಾಬೋವಿ.—ಇಷ್ಟು ಸಣ್ಣ ಗ್ರಾಮದಲ್ಲಿ ಜನ ನಾಟಕವಾಡಬೇಕು ಎಂದು ಹೇಳಿದಾಗ ಇಲ್ಲಿ ಸುಮಾರು ನಾನೂರು ಜನಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಬೇರೆ ಕಡೆಯಿಂದ ಪೋಲೀಸಿನವರನ್ನು ಏಕೆ ಕರೆಸಬೇಕಾಗಿತ್ತು ? ಇದರಿಂದ ಇಲ್ಲಿ ಯಾರೂ ನಾಟಕವಾಡಬಾರದು ಎಂದು ಸರಕಾರದ ಉದ್ದೇಶವಾಗಿತ್ತೇ ?

ಶ್ರೀ ವೀರೇಂದ್ರ ಪಾಟೀಲ್.—ನಾಟಕವಾಡುವ ವಿಚಾರ ಬೇರೆ. ಲೈಸನ್ಸ್ ಪಡೆದು ಯಾರು ಬೇಕಾದರೂ ನಾಟಕ ಆಡಬಹುದು. ಬೇರೆ ಕಡೆಗಳಲ್ಲಿ ಲೈಸನ್ಸ್ ಪಡೆದು ನಾಟಕವಾಡುತ್ತಿದ್ದಾರೆ. ಇದಕ್ಕೆ ಸರಕಾರ ಯಾವ ಅಡ್ಡಿಯನ್ನೂ ತರುತ್ತಿಲ್ಲ. ಆದರೆ ಇಲ್ಲಿ ಎರಡು ಪಾರ್ಟಿಗಳಿದ್ದವು ಮತ್ತು ಒಂದಕ್ಕೊಂದು ಜಗಳವಾಡುತ್ತಿದ್ದುದರಿಂದ ಇಲ್ಲಿ ನಾಟಕವಾಡಿದರೆ ಜನರ ಶಾಂತಿಗೆ ಭಂಗ ಬರಬಹುದು ಎಂದು ಇಲ್ಲಿರುವ ಸ್ಥಳೀಯ ಅಧಿಕಾರಿಗಳು 144ನೇ ಸೆಕ್ಷನ್ ಉಪಯೋಗ ಮಾಡಬೇಕೆಂದು ಇಲ್ಲಿ ಕ್ರಮ ತೆಗೆದುಕೊಳ್ಳಬೇಕಾಯಿತು.

Mr. SPEAKER.—Since the Hon. Minister concerned is not here, I hold-over Question No. 455.

Deposits by Taluk Agricultural Produce Marketing Societies

66. Sri SADASHIVAPPA PATIL (Deodurg).—

Will the Minister of State for Food and Civil Supplies be pleased to state :—

(*a*) the number of Taluk Agricultural Produce Marketing Co-operative Societies in the State ;